ಜಯನಗರ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ನಿರ್ಮೂಲನ ಮಂಡಳಿಯ ಕಾರ್ಯಕ್ರಮಗಳು

739 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷದಲ್ಲಿ ಕೊಳಚೆ ನಿರ್ಮೂಲನ ಮಂಡಳಿಯು ವಿವಿಧ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಖರ್ಚು ಮಾಡಿರುವ ಹಣವೆಷ್ಟು? (ಪೂರ್ತಿ ವಿವರ ನೀಡುವುದು)

ಆ) ಒಟ್ಟು ಎಷ್ಟು ಕುಟುಂಬಗಳು ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ?

ಇ) ಇಲ್ಲಿಯವರೆಗೆ ಎಷ್ಟು ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ?

ಈ) ಜಯನಗರ ಪ್ರದೇಶಗಳಲ್ಲಿ ವಾಸಿಸುವ ಎಷ್ಟು ಜನರಿಗೆ ಇಲ್ಲಿಯವರೆಗೆ ಹಕ್ಕುಪತ್ರ ನೀಡಲಾಗಿದೆ?

ಉ) ಉಳಿದವರಿಗೆ ಯಾವಾಗ ನೀಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಜಯನಗರ ವಿಧಾನಸಭಾ ಕ್ಷೇತ್ರದ ಮಂಡಳಿಯ ವ್ಯಾಪ್ತಿಗೆ ಒಳಪಡುವ ವಿವಿಧ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಖರ್ಚು ಮಾಡಿರುವ ವರ್ಷಾವಾರು ವಿವರ ಕೆಳಗಿನಂತಿದೆ. (ಪೂರ್ತಿ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ)

ವರ್ಷ	ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)
1995-96	8.48
1996-97	7.97
1997-98	8.32

ಆ) ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುರುತಿಸಿದ ಒಟ್ಟು 46 ಕೊಳಚೆ ಪ್ರದೇಶಗಳಲ್ಲಿ 14,775 ಕುಟುಂಬಗಳಿರುವುದಾಗಿಯೂ ಹಾಗೂ ಈ ಪೈಕಿ 7232 ಕುಟುಂಬಗಳು ಘೋಷಿತ 21 ಕೊಳಚೆ ಪ್ರದೇಶಗಳಲ್ಲಿ ಇರುವುದಾಗಿ ಅಂದಾಜು ಮಾಡಲಾಗಿದೆ.

ಇ) ಘೋಷಿತಗೊಂಡ 21 ಕೊಳಚೆ ಪ್ರದೇಶಗಳ ಪೈಕಿ ಇಲ್ಲಿಯವರೆಗೆ 3 ಕೊಳಚೆ ಪ್ರದೇಶಗಳಲ್ಲಿ ವಸತಿ ಯೋಜನೆ ಕೈಗೊಂಡಿದ್ದು ತಾವರೆಕೆರೆ ಸ.ನಂ.5 ಹಾಗೂ ಸ.ನಂ.7ರಲ್ಲಿ ಅನುಕ್ರಮವಾಗಿ 172 ಹಾಗೂ 129 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಿ 301 ಹಕ್ಕುಪತ್ರಗಳನ್ನು ನೀಡಲಾಗಿದೆ. ವಿಜಯ ಕಾಲೇಜ್ ಹಿಂಭಾಗದ ಕೊಳಚೆ ನಿವಾಸಿಗಳನ್ನು ಆಲಹಚ್ಚಿಗೆ ಸ್ಥಳಾಂತರ ಮಾಡಿದ್ದು ಹಕ್ಕುಪತ್ರಗಳನ್ನು ವಿತರಿಸಲು ಕ್ರಮಕೈಕೊಳ್ಳಲಾಗುತ್ತಿದೆ. ಇನ್ನುಳಿದ 14 ಕೊಳಚೆ ಪ್ರದೇಶದ 4022 ಕುಟುಂಬಗಳಿಗೆ ಗುರುತು ಪತ್ರಗಳನ್ನು ಈಗಾಗಲೇ ನೀಡಲಾಗಿದ್ದು ಉಳಿದ 557 ಕುಟುಂಬಗಳಿಗೆ ಗುರುತು ಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ 4 ಕೊಳಚೆ

ಪ್ರದೇಶಗಳ ಪೈಕಿ ತಾಯಪ್ಪನಹಳ್ಳಿ ಕೊಳಚೆ ಪ್ರದೇಶದ ಕುರುಂಬಗಳಿಗೆ ಬೆಂಗಳೂರು ಮಹಾನಗರ ಪಾಲಿಕೆಯವರು ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಉಳಿದ ಪ್ರಿಯದರ್ಶಿನಿ ಬನೇರುಘೆಟ್ಟ ಕೊಳಚೆ ಪ್ರದೇಶ ಸ.ನಂ.81 ಬಜಾಜ್ ಎಸ್ಟೇಟ್ ಹತ್ತಿರದ ಕೊಳಚೆ ಪ್ರದೇಶ ಮತ್ತು ಸ.ನಂ.20 ಮೈಕೋ ಫ್ಯಾಕ್ಟರಿ ಹತ್ತಿರದ ಕೊಳಚೆ ಪ್ರದೇಶದ ಕುಟುಂಬಗಳಿಗೆ ಗುರುತು ಪತ್ರಗಳನ್ನು ವಿತರಿಸಲು ಮಂಡಳಿಯು ಕ್ರಮ ಕೈಗೊಂಡಾಗ ಸದರಿ ಪ್ರದೇಶದ ನಿವಾಸಿಗಳು ಗುರುತು ಪತ್ರಗಳನ್ನು ಪಡೆಯಲು ಆಸಕ್ತಿ ತೋರಿರುವುದಿಲ್ಲ.

ಈ) 301 ಹಕ್ಕು ಪತ್ರ ನೀಡಲಾಗಿದೆ.

ಉ) ದಯಾನಂದ ಕೊಳಚೆ ಪ್ರದೇಶದ 204 ಕುಟುಂಬಗಳು ಸ.ನಂ.66 ಆಡುಗೋಡಿಯ 49 ಕುಟುಂಬಗಳು, ಹೊಂಬೇಗೌಡ ನಗರದ 31 ಕುಟುಂಬಗಳು, ಗುಲ್ಬರ್ಗಾ ಗುಡಿಸಲಿನ 154 ಕುಟುಂಬಗಳು, ಸೋಮೇಶ್ವರ ಕೊಳಚೆ ಪ್ರದೇಶ 50 ಕುಟುಂಬಗಳು, ಸ.ನಂ. 77 ಆಡುಗೋಡಿಯ 55 ಕುಟುಂಬಗಳು ಹಾಗೂ ನಕಲು ಬಂಡೆ ಕೊಳಚೆ ಪ್ರದೇಶದ 14 ಕುಟುಂಬಗಳು ಅಂದರೆ ಒಟ್ಟು ಉಳಿದ 557 ಕುಟುಂಬಗಳಿಗೆ ಗುರುತು ಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಖರ್ಚು ಮಾಡಿರುವ ಹಣದ ವಿವರ

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)
	1995-96ನೇ ಸಾಲು	
1.	ಗುರುಪ್ಪನಪಾಳ್ಯ ಕೊಳಚೆ ಪ್ರದೇಶ	1,91,884.00
2.	ಸರ್ವೆ ನಂ.5 ತಾವರೆಕೆರೆ	1,37,259.00
3.	ಸೋಮೇಶ್ವರ ಕೊಳಚೆ ಪ್ರದೇಶ (ವಸತಿಗೃಹ ಯೋಜನೆ-56 ಮನೆಗಳು)	5,19,425.00
		8,48,568.00
	1996-97ನೇ ಸಾಲು	
1.	ಸರ್ವೆ ನಂ.66, ಆಡುಗೋಡಿ	53,742.00
2.	ಸರ್ವೆ ನಂ.5, ತಾವರೆಕೆರೆ	39,000.00
3.	ಗುಲ್ಬರ್ಗಾ ಹಟ್ಸ್	1,25,519.00
4.	ಸೋಮೇಶ್ವರ ಕೊಳಚೆ ಪ್ರದೇಶ	5,79,059.00
		7,97,320.00

		1997-98ನೇ ಸಾಲು
1.	ಸರ್ವೆ ನಂ. 7, ತಾವರೆಕೆರೆ	38,777.00
2.	ಸರ್ವೆ ನಂ.66, ಆಡುಗೋಡಿ	98,957.00
3.	ನಕ್ಕಲುಬಂಡೆ	72,767.00
4.	ಸರ್ವೆ ನಂ.5, ತಾವರೆಕೆರೆ	1,50.000.00
5.	ಗುಲ್ಬರ್ಗಾ ಹಟ್ಸ್	12,000.00
6.	ಸರ್ವೆ ನಂ.7, ತಾವರೆಕೆರೆ ಶಾಲಾಕಟ್ಟಡ -ಎನ್.ಎಸ್.ಡಿ.ಪಿ	2,24,000.00
7.	ಸೋಮೇಶ್ವರ ಕೊಳಚೆ ಪ್ರದೇಶ (ವಸತಿ ಯೋಜನೆ)	2,36,295.00
		8,32,796.00

ಬೆಂಗಳೂರಿನ ಲಾಲ್‌ಬಾಗ್ ಅಭಿವೃದ್ಧಿ ಕೆಲಸ

740 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಾಲ್‌ಬಾಗ್ ಅಭಿವೃದ್ಧಿಗಾಗಿ97-98ರಲ್ಲಿ ಖರ್ಚು ಮಾಡಿದ ಹಣವೆಷ್ಟು?

ಆ) ಆ ಹಣದಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳ ವಿವರ ನೀಡುವುದು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) :

ಅ) ಲಾಲ್‌ಬಾಗ್ ಅಭಿವೃದ್ಧಿಗಾಗಿ 1997-98ನೇ ಸಾಲಿನಲ್ಲಿ25 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

1. ಸಸ್ಯತೋಟದಲ್ಲಿ ವಿದ್ಯುತ್ ದೀಪಗಳನ್ನು ನಿರ್ವಹಿಸಲಾಗಿದೆ.
2. ಸಸ್ಯತೋಟದಲ್ಲಿ ಸ್ವಚ್ಛತೆ ಕಾಪಾಡಲು ಡಸ್ಟ್‌ಬಿನ್‌ಗಳನ್ನು ಅಲ್ಲಲ್ಲಿ ಇಡಲಾಗಿದೆ.
3. ಲಾಲ್‌ಬಾಗ್ ಕೆರೆಯಲ್ಲಿ "ಬಕಾರ್ನಿಯ" ಕಳೆಯನ್ನು ತೆಗೆಯಲಾಗಿದೆ.
4. ಕುಡಿಯುವ ನೀರಿನ ಸೌಲಭ್ಯವನ್ನು ಉತ್ತಮ ಪಡಿಸಲಾಗಿದೆ.
5. ಕೆಲವು ಭಾಗದ ರಸ್ತೆ ಬದಿಯಲ್ಲಿ ಅಂಚುಗಿಡಗಳನ್ನು ಹಾಕಲಾಗಿದೆ.
6. ಕೆಂಪೇಗೌಡ ಗೋಪುರ ಹಾಗೂ ಗಾಜಿನ ಮನೆ ಮತ್ತು ಇತರೆ ಮುಖ್ಯ ಕಟ್ಟಡಗಳ ನಿರ್ವಹಣೆ ಕಾರ್ಯಕೈಗೊಳ್ಳಲಾಗಿದೆ.